1	2	3	4
	ಮದ್ದೂರು ತಾಲ್ಲೂಕು		
1)	ಕೆಸ್ತೂರು ಕೆರೆಗೆ ಏತ ನೀರಾವರಿ	ರೂ. 41.70 ಲಕ್ಷ	ಸಿವಿಲ್ ಕಾಮಗಾರಿಯ ಟೆಂಡರ್ ಪರಿಶೀಲನೆಯಲ್ಲಿದೆ.
2)	ಕದಲೂರು ಏತ ನೀರಾವರಿ ಯೋಜನೆ	ರೂ. 46.90 ಲಕ್ಷ	ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದೆ. ರೈಸಿಂಗ್ ಮೈನ್ ಕಾಮಗಾರಿಯ ಟೆಂಡರ್ ಪರಿಶೀಲನೆಯಲ್ಲಿದೆ.
3)	ಅತಗೂರು ಮಾಚಹಳ್ಳಿ ಏತ ನೀರಾವರಿ ಯೋಜನೆ	ರೂ. 25.50 ಲಕ್ಷ	ಸಿವಿಲ್ ಕಾಮಗಾರಿ ಪ್ರಗತಿಯಲ್ಲಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಏಜೆಂಟರುಗಳಿಗೆ ಪ್ರೋತ್ಸಾಹ ಧನ ನೀಡದಿರುವುದು

1157 (1392) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಣ್ಣ ಉಳಿತಾಯ ಮುಜರಾಯಿ ಮತ್ತು ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಜನ ಏಜೆಂಟರುಗಳಿಗೆ ಪ್ರೋತ್ಸಾಹ ಧನ ನೀಡಲು ಬಾಕಿ ಇರುತ್ತದೆ? ಇದರ ಮೊತ್ತವೆಷ್ಟು?

2) ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳಲ್ಲಿ ಸಣ್ಣ ಉಳಿತಾಯ ಏಜೆಂಟರುಗಳಿಗೆ ಕಳೆದ ಎರಡು ವರ್ಷಗಳಿಂದ ಪ್ರೋತ್ಸಾಹ ಧನ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಬಾಕಿ ಇದ್ದಲ್ಲಿ ನಿಯಮಿತವಾಗಿ ಪಾವತಿಸಲು ಇರುವ ತೊಂದರೆಗಳೇನು? ಯಾವಾಗ ಪಾವತಿಸಲಾಗುವುದು?

ಶ್ರೀ ಬಾಬು ರಾವ್ ಚಿಂಚನಸೂರ್ (ಸಣ್ಣ ಉಳಿತಾಯ, ಮುಜರಾಯಿ ಹಾಗೂ ವಿಮೆ ರಾಜ್ಯ ಸಚಿವರು)

1) ಶಿವಮೊಗ್ಗ ಜಿಲ್ಲೆಯಲ್ಲಿ 775 ಜನ ಏಜೆಂಟರುಗಳಿಗೆ ಪ್ರೋತ್ಸಾಹ ಧನ ನೀಡಲು ಬಾಕಿ ಇದ್ದು, ಇದರ ಮೊತ್ತ ರೂ. 81.00 ಲಕ್ಷಗಳು

2) 1998-99 ನೇ ಸಾಲಿನಲ್ಲಿ ಸಕಾಲದಲ್ಲಿ ನ್ಯೀಕೃತವಾದ ಎಲ್ಲಾ ಏಜೆಂಟರ ಕ್ಲೈಂಗಳಿಗೆ ಪ್ರೋತ್ಸಾಹಕ ಧನ ಪಾವತಿಸಲಾಗಿದೆ. 1999-2000 ನೇ ಸಾಲಿನಲ್ಲಿ ಹೊಸನಗರ ತಾಲ್ಲೂಕಿಗೆ ಸಂಬಂಧಿಸಿದಂತೆ ಮಾತ್ರ 33 ಕ್ಲೈಂಗಳು ಬಾಕಿ ಇವೆ.

3) ಬಾಕಿ ಇರುವ ಕ್ಲೈಂಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.